# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 417
2) ಸದಸ್ಯರ ಹೆಸರು : ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 10-12-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಾವಣಗೆರೆ ಜಿಲ್ಲೆಯಲ್ಲಿ ಮೀನುಗಾರರನ್ನು ಉತ್ತೇಜಿಸಲು ಸರ್ಕಾರ ಯಾವ ರೀತಿಯ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ; (ಪೂರ್ಣ ವಿವರ ಒದಗಿಸುವುದು)</td><td rowspan="2"><u>ಜಿಲ್ಲಾ ಪಂಚಾಯತ್ ಯೋಜನೆ</u>:<br><br>1) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ: ಮೀನುಗಾರಿಕೆ ವೃತ್ತಿ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.10,000/- ವೆಚ್ಚದ ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗುವುದು.<br><br>ಬಾವಿ ಮತ್ತು ಹೊಂಡಗಳಲ್ಲಿ ಮೀನು ಕೃಷಿ ಮಾಡಲು ಉಚಿತವಾಗಿ 500 ಮೀನುಮರಿಗಳನ್ನು ವಿತರಿಸಲಾಗುವುದು.<br><br>ಮೀನು ಕೃಷಿ ಕೊಳ ನಿರ್ಮಿಸಲು ಘಟಕ ವೆಚ್ಚ ರೂ.7.00 ಲಕ್ಷಕ್ಕೆ ಶೇ.40 ರಷ್ಟು ಸಾಮಾನ್ಯ ವರ್ಗ, ಪ.ಜಾತಿ, ಪ.ಪಂಗಡದ ಫಲಾನುಭವಿಗಳಿಗೆ ಶೇ. 60 ರಷ್ಟು ಸಹಾಯಧನ ನೀಡಲಾಗುವುದು.<br><br>2) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ: ಈ ಯೋಜನೆಯಡಿ ಮೀನುಗಾರರು ಜಲಸಂಪನ್ಮೂಲಗಳಿಂದ ತಾಜಾ ಮೀನುಗಳನ್ನು ಮಾರಾಟ ಕೇಂದ್ರಗಳಿಗೆ ಮತ್ತು ಗ್ರಾಹಕರಿಗೆ ತ್ವರಿತವಾಗಿ ತಲುಪಿಸಲು ದ್ವಿಚಕ್ರ ವಾಹನ ಮತ್ತು ಕ್ರೇಟ್ಸ್ ಖರೀದಿಸಲು ಘಟಕ ವೆಚ್ಚ ರೂ. 75,000/- ಗಳಿಗೆ ಶೇ.40% ರಷ್ಟು ಅಥವಾ ಗರಿಷ್ಟ 30,000/- ಸಹಾಯಧನ ನೀಡಲಾಗುವುದು.<br><br><u>ರಾಜ್ಯ ವಲಯ ಯೋಜನೆ</u> :<br><br>1) ಮೀನುಮರಿ ಖರೀದಿಗೆ ಸಹಾಯಧನ: ಸದರಿ ಯೋಜನೆಯಡಿ ಕೆರೆಗಳನ್ನು ಗುತ್ತಿಗೆ / ಹರಾಜಿನಲ್ಲಿ ಪಡೆದ ಮೀನುಕೃಷಿಕರು ಸರ್ಕಾರದ ಮೀನುಮರಿ ಕೇಂದ್ರ / ಇಲಾಖೆಯಿಂದ ನೊಂದಣಿಯಾಗಿರುವ ಖಾಸಗಿ ಮೀನುಮರಿ ಕೇಂದ್ರಗಳಿಂದ ಖರೀದಿಸಿದ ಮೀನುಮರಿಗಳ ಮೌಲ್ಯದ ಶೇ.50% ಅಥವಾ ಫಲಾನುಭವಿಗೆ ಗರಿಷ್ಟ ರೂ.5000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಟ ರೂ.20,000/- ಸಹಾಯಧನ ನೀಡಲಾಗುವುದು.<br><br>2) ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ: ಮೀನುಗಾರಿಕೆ ವೃತ್ತಿ ಮಾಡುತ್ತಿರುವ ಫಲಾನುಭವಿಗಳಿಗೆ ರೂ.10,000/- ವೆಚ್ಚದ ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗುವುದು.<br><br>3) ಕೆರೆ ಅಂಚಿನಲ್ಲಿ ಮೀನುಕೃಷಿ ಪ್ರೋತ್ಸಾಹ: ಕೆರೆ/ಜಲಾಶಯಗಳ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣದ ಮೀನುಮರಿ ಪಾಲನಾ ಕೊಳದಲ್ಲಿ ಮೀನುಮರಿಗಳನ್ನು ಸಾಕಾಣಿಕೆ ಮಾಡಲು ತಗುಲುವ ವೆಚ್ಚ ರೂ.2,50ಲಕ್ಷ ಗಳಿಗೆ ಶೇ.100%ರಷ್ಟು ಸಹಾಯಧನವನ್ನು ನೀಡಲಾಗುವುದು.</td></tr>
<tr><td>ಆ)</td><td>ಸದರಿ ಜಿಲ್ಲೆಯಲ್ಲಿ ಮೀನುಗಾರಿಕೆ ನಡೆಸುವವರಿಗೆ ಸರ್ಕಾರ ಯಾವ ಯಾವ ರೀತಿಯ ಸಹಾಯಧನ / ಸೌಲಭ್ಯಗಳನ್ನು ಒದಗಿಸುತ್ತಿದೆ? (ಸಂಪೂರ್ಣ ವಿವರ ಒದಗಿಸುವುದು)</td></tr>
</table>

4) **ನಾಲ್ಕುಚಕ್ರ ವಾಹನ ಖರೀದಿ ಯೋಜನೆ:** ವಿಶೇಷ ಘಟಕ/ ಗಿರಿಜನ ಉಪಯೋಜನೆಯಡಿ ಪ.ಜಾತಿ/ಪ.ಪಂಗಡ ಮೀನುಗಾರರಿಗೆ ವಾಹನ ಖರೀದಿಸಲು ಶೇ50%ರ ಸಹಾಯಧನ ನೀಡುವುದು.

**ಮತ್ಸ್ಯಾಶ್ರಯ ಯೋಜನೆ:** ವಸತಿ ರಹಿತ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸುವುದು. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ.1.20 ಲಕ್ಷ, ಗ್ರಾಮೀಣ ಪ್ರದೇಶದ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳಿಗೆ ರೂ.1.75 ಲಕ್ಷ ಮತ್ತು ನಗರ ಪ್ರದೇಶದ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳಿಗೆ ರೂ.2.00 ಲಕ್ಷಗಳನ್ನು ನೀಡಲಾಗುತ್ತಿದೆ.

**ಕೇಂದ್ರ ವಲಯ ಯೋಜನೆ:**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ (PMMSY) ಯೋಜನೆಯಡಿ ಮೀನುಗಾರರಿಗೆ ಪ್ರಮುಖವಾಗಿ ಮೀನು ಕೃಷಿ ಕೊಳ ನಿರ್ಮಾಣಕ್ಕಾಗಿ ಸಹಾಯ, RAS/Biofloc ನಂತಹ ಆಧುನಿಕ ತಂತ್ರಜ್ಞಾನಗಳಿಂದ ಮೀನು ಕೃಷಿ ಕೈಗೊಳ್ಳಲು ಸಹಾಯ, ಮೀನು ಮಾರಾಟಕ್ಕಾಗಿ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನ ಖರೀದಿಗೆ ಸಹಾಯಧನವನ್ನು ಕೇಂದ್ರದ ಪಾಲು ಶೇ. 60 ಹಾಗೂ ರಾಜ್ಯದ ಪಾಲು ಶೇ. 40 ರಂತೆ ಸಹಾಯಧನ ನೀಡಲಾಗುತ್ತಿದೆ.

"ಮತ್ಸ್ಯವಾಹಿನಿ" ಯೋಜನೆಯಡಿ ಪರಿಸರ ಸ್ನೇಹಿ ವಿದ್ಯುತ್ ಚಾಲಿತ ತ್ರಿಚಕ್ರ ವಾಹನಗಳನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ರವರಿಂದ ಅರ್ಹ ಫಲಾನುಭವಿಗಳಿಂದ ನಿಗದಿತ ಪಾವತಿ ಮೊತ್ತ ಪಾವತಿಸಿಕೊಂಡು ಹಸಿ ಮೀನು ಹಾಗೂ ಮೀನು ಖಾದ್ಯಗಳನ್ನು ಮಾರಾಟ ಮಾಡಲು ವಿತರಿಸಲಾಗುತ್ತಿದೆ.

2024-25ನೇ ಸಾಲಿನಿಂದ ಪ್ರಧಾನ ಮಂತ್ರಿ ಯೋಜನೆಯಡಿ (PMMSY) ಧರ್ತಿ ಆಭಾ ಜನ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನದಡಿ ಬುಡಕಟ್ಟು ಸಮುದಾಯದ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಮಾತ್ರ ದ್ವಿಚಕ್ರ / ತ್ರಿಚಕ್ರ ವಾಹನ / ಜೀವಂತ ಮೀನು ಮಾರಾಟ ಕೇಂದ್ರವನ್ನು ಸ್ಥಾಪಿಸಲು ಘಟಕ ವೆಚ್ಚ 90% ಸಹಾಯಧನ ನೀಡಲಾಗುವುದು.

ಸಂಖ್ಯೆ: ಪಸಂಮೀ ಇ-200 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು